ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಹೆಸರು ಮತ್ತು ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಹೆಸರು ಮತ್ತು ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1996 ರ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯನಿಗದಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ:

"1996ರ ಕರ್ನಾಟಕ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(2) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ 1996 ಪರ್ಯಾರೋಚನಾ ಪ್ರಸ್ತಾವ

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 1996ರ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತ್ತು.

ಶ್ರೀ ಎಂ. ಸಿ .ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ, ಇದು ನ್ಯಾಯವಾದಿಗಳ ಒಂದು ಕಲ್ಯಾಣ ನಿಧಿ. ನಮ್ಮ ಕರ್ನಾಟಕ ಬಾರ್ ಕೌನ್ಸಿಲನಲ್ಲಿರತಕ್ಕಂತಹ ಅಧ್ಯಕ್ಷರು ಮತ್ತು ಆಡಳಿತ ಮಂಡಲಿಯ ಸದಸ್ಯರ ಜೊತೆಯಲ್ಲಿ ನಾನು ಚರ್ಚೆ ಮಾಡಿದಾಗ ಇದಕ್ಕೆ ಕೆಲವು ತಿದ್ದುಪಡಿಗಳನ್ನು ತರಬೇಕೆಂದೇ ಅವರೇ ಸಲಹೆ ಮಾಡಿದರು. ಆ ತಿದ್ದುಪಡಿಗಳಲ್ಲಿ ಪ್ರಾಮುಖ್ಯವಾಗಿರತಕ್ಕದ್ದು ಯಾವುದು ಎಂದರೆ ಒಂದು ಈಗ ಇರತಕ್ಕ ಸದಸ್ಯತ್ವ ಶುಲ್ಕವನ್ನು ಹೆಚ್ಚಿಸಬೇಕೆಂದು ಎಂದು ಹೇಳುತ್ತಿರತಕ್ಕದ್ದು. 100 ರೂಪಾಯಿಯಿಂದ ಒಂದು ಸಾವಿರ ರೂಪಾಯಿಯವರೆಗೆ. ಅದನ್ನು ಅವರೇ ಸೂಚಿಸಿರತಕ್ಕದ್ದು, ನಾವಲ್ಲ. ಕಡೆಗೆ ಈಗ ಕೊಡುತ್ತಿರತಕ್ಕ 50 ಸಾವಿರ ರೂಪಾಯಿ, ಎಲ್ಲಾದರೂ ಯಾವುದಾದರೂ

ಒಬ್ಬ ವಕೀಲ ಅವನಿಗೆ ಪ್ರಾಕ್ಟೀಸ್ ಮಾಡಲಿಕ್ಕೆ ಆಗದೇ ಇರತಕ್ಕ ಪರಿಸ್ಥಿತಿ ನಿರ್ಮಾಣ ಆದಾಗ ಅವರಿಗೆ 50 ಸಾವಿರ ರೂಪಾಯಿ ಕೊಡಲಿಕ್ಕೆ ಇರತಕ್ಕದ್ದಕ್ಕೆ ಇವತ್ತು ಅವಕಾಶ ಇದೆ. ಬಹುಶಃ ಇವತ್ತಿನ ಕಾನೂನಿನಲ್ಲಿ ಅವರೆಲ್ಲಾದರೂ ಸತ್ತು ಹೋದರೆ ಅವರ ಉತ್ತಾರಾಧಿಕಾರಿಯವರಿಗೆ ಹಣ ಕೊಡಲಿಕ್ಕೆ ಅವಕಾಶ ಇಲ್ಲ. ಆ ಅವಕಾಶವನ್ನು ಕಲ್ಪಿಸುವುದಕೋಸ್ಕರ, ಮತ್ತು ಮೂರನೆಯದಾಗಿ ಈ ಕೋರ್ಟ್ ಫೀ ಯಾವುದು ಇದೆ! ವಕಾಲತ್ತಿನ ಮೇಲೆ ನಾವು ಸ್ಟ್ಯಾಂಪ್ ಹಾಕುತ್ತಿರತಕ್ಕದ್ದು ನೇರವಾಗಿ ಕಲ್ಯಾಣ ನಿಧಿಗೆ ಹೋಗುತ್ತಿದ್ದೆ. ಅದು ಎರಡು ರೂಪಾಯಿ ಈಗ ಇರುವುದನ್ನು ಐದು ರೂಪಾಯಿಗೆ ಏರಿಸಬೇಕೆಂದು ಅವರೇ ಕೇಳಿದ್ದಾರೆ. ನಾವು ಅದನ್ನೂ ಕೂಡ ಮಾಡಬೇಕೆಂದು ಕೇಳಿದ್ದೇವೆ. ಇನ್ನೊಂದು ವಿಚಾರ. ಈ ಸೀನಿಯರ್ ಅಡ್ವೋಕೇಟ್ಸ್ ಯಾರು ಇದ್ದಾರೆ ಅವರು ಪ್ರತಿವರ್ಷ ಈ ಕಲ್ಯಾಣ ನಿಧಿಗೆ 2500 ರೂಪಾಯಿಯನ್ನು ಅವರ ವಂತಿಗೆ ಕೊಡಬೇಕೆಂದು ಅವರು ಸೂಚಿಸಿದ್ದಾರೆ. ಶ್ರೀಮತಿ ಪ್ರಮೀಳಾ ಅವರಿಗೆ ಅದು ಬರುತ್ತದೆಯೇ ಅಥವಾ ಇಲ್ಲವೋ ಗೊತ್ತಿಲ್ಲ. ಕಡೆಯದಾಗಿ ಒಂದು ವಿಚಾರ ಅಂದರೆ ಇದರಲ್ಲಿ ಕಾಂಟ್ರಿಬ್ಯೂಷನ್ಸ್ ಟುದಿ ಫಂಡ್.

ಉಪಾಧ್ಯಕ್ಷರು : ಮಿನಿಮಮ್ ಇಷ್ಟು ಎಂದು ಮಾಡಿ.

ಶ್ರೀ ಎಂ. ಸಿ. ನಾಣಯ್ಯ : ಮಿನಿಮಮ್ ಎಂದು ಮಾಡಿದ್ದಾರೆ. ಕಡೆಯದಾಗಿ ಹೇಳುತ್ತಿರತಕ್ಕದ್ದು ಏನೆಂದರೆ ಇದರಲ್ಲಿ ಕಾಂಟ್ರಿಬ್ಯೂಷನ್ಸ್ ಟು ದಿ ಫಂಡ್ ಎಂದು ಹೇಳುತ್ತಿರತಕ್ಕದ್ದರಲ್ಲಿ ಸರ್ಕಾರದ ವಂತಿಗೆ ಒಂದು ಅವಕಾಶವನ್ನು ಕಲ್ಪಿಸಿದ್ದೇವೆ.

ಶ್ರೀ ವೈ. ರಾಮಕೃಷ್ಣ : ಸರ್ಕಾರದ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಆಕ್ಟ ನಲ್ಲಿ ಇದೆ ತಾನೇ?

ಶ್ರೀ ಎಂ. ಸಿ. ನಾಣಯ್ಯ : ಹಿಂದೆ ಇರಲಿಲ್ಲ. ಈಗ ನಾವು ಕಲ್ಪಿಸಿದ್ದೇವೆ. Contribution made by the State Government. In Section 26(A) of the Principal Act Sub-Section 3 after Clause A the following Clause shall be inserted viz., the contribution made by the State Government. I think it has been done only for that.

SRI Y. RAMAKRISHNA (ANEKAL) : I hope you will implement this. I hope it will not remain statute, and you will implement it.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಉಪಾಧ್ಯಕ್ಷರೆ, ನೀವು ಸೀನಿಯರ್ ಅಡ್ವೊಕೇಟ್ಸ್ ಎಂದು ಯಾರನ್ನು ಹೇಳುತ್ತೀರಿ? ಡೆಸಿಗ್ನೇಟೆಡ್ ಅಡ್ವೋಕೇಟ್ಸ್ ಅಥವಾ Those who have put in more than then years ಅದನ್ನು ತಾವು ಸ್ಪೆಸಿಫೈ ಮಾಡಬೇಕಾಗುತ್ತದೆ. ಇಲ್ಲವೆಂದರೆ ಈಗ ಇರತಕ್ಕ ಕಾನೂನಿನಲ್ಲಿ ಸೀನಿಯರ್ ಅಡ್ವೋಕೇಟ್ ಎಂದರೆ ಬೆಂಗಳೂರಿನಲ್ಲಿ ಆರು ಜನ. ಇದರಲ್ಲಿ ನಿಮಗೆ ಯಾರೂ ಸಿಗದೇ ಇದ್ದರೆ ನಿಮಗೆ ಫಂಡ್‌ಗೆ ಏನೂ ಸಿಗುವುದಿಲ್ಲ. ಇದ್ದವರಲ್ಲಿ 6 ಜನರಲ್ಲಿ ಇಬ್ಬರು ಹೈಕೋರ್ಟ್ ಜಡ್ಜ್ ಆಗಿ ಹೋದವರು. ಇನ್ನು ಉಳಿದವರು

5 ಜನ ಅಂದರೆ ಇದರಲ್ಲಿ ಏನಾದರೂ ನಿಮಗೆ ಸಿಗುತ್ತದೆಯೇ? ಇದರಿಂದ ಏನೂ ಆಗುವುದಿಲ್ಲ. 10 ಸಾವಿರ ರೂಪಾಯಿ ತೆಗೆದುಕೊಂಡರೆ ಏನೂ ಮಾಡಲು ಆಗುವುದಿಲ್ಲ. ನೀವು ಅದರ ಬದಲು ಸೀನಿಯರ್ ಅಡ್ವೊಕೇಟ್ for the purpose of this Act. ಎಂದು ಹೇಳಿ ಡೆಸಿಗ್ನೇಟ್ ಮಾಡಿ ಡಿಫೈನ್ ಮಾಡಬೇಕಗುತ್ತದೆ. ಬರೀ ಸೀನಿಯರ್ ಅಡ್ವೋಕೇಟ್ ಎಂದು ಹೇಳಿದರೆ ಏನೂ ಪ್ರಯೋಜನ ಆಗುವುದಿಲ್ಲ. ನೀವು ಏನು ತರಬೇಕೆಂಬ ಉದ್ದೇಶ ಇದ್ದರೂ ಕೂಡ ಅದರಿಂದ ಪ್ರಯೋಜನ ಏನೂ ಕೂಡ ಆಗುವುದಿಲ್ಲ. ಸ್ವಲ್ಪ ತಾವು ಯೋಚಿಸಿ.

SRI M. C. NANAIAH : I have brought this amendment in response to the suggestion made by the president and Members of the Karnataka Bar Council. They have given this suggestion to me. Ultimately it is the Karnataka Bar Council which operates this Act. I have done it in pursuance of their suggestion. Let it go back, let them find out in what manner they should do that and if they want to frame rules..

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಸೀನಿಯರ್ ಅಡ್ವೋಕೇಟ್ಸ್ ವಕಾಲತ್ತು ಹಾಕುವುದಿಲ್ಲ.

SRI M.C. NANAIAH : I know about that. Kindly see that something is doen about that.

ಶ್ರೀಮತಿ ಪ್ರಮೀಳಾ ನೇಸರ್ಗಿ : ಇದನ್ನು ಮಾಡಬೇಕಾಗಿರತಕ್ಕದ್ದು ಜೂನಿಯರ್ ಅಡ್ವೋಕೇಟ್ ಅವರ ಬೆಲ್‌ಷೇರ್‌ಗೆ. ನೀವು ಸೀನಿಯರ್ ಅಡ್ವೋಕೇಟ್ಸ್‌ನಿಂದ ವರ್ಷಕ್ಕೆ ಹತ್ತುಸಾವಿರ ರೂಪಾಯಿ ತೆಗೆದುಕೊಂಡರೆ ಅದರಿಂದ ಏನೂ ಉಪಯೋಗ ಆಗುವುದಿಲ್ಲ. ಅದರ ಬದಲು ಪ್ರತಿ ಸೀನಿಯರ್ ಅಡ್ವೋಕೇಟ್ ಜೂನಿಯರ್ ಅಡ್ವೊಕೇಟಗೆ ಈಫಂಡಗೆ ಕಾಂಟ್ರಿಬ್ಯೂಟ್ ಮಾಡಬೇಕೆಂದು ಮಾಡುವುದಾದರೆ ಅದು ವೆಲಕಂ ಸಜೆಷನ್ ಆಗುತ್ತದೆ. ಆದರಿಂದ ಬಹಳ ಜನ ಜೂನಿಯರ್ ಅಡ್ವೊಕೇಟ್ ಬದುಕಿಕೊಳ್ಳುತ್ತಾರೆ. ಈ ಸೀನಿಯರ್ ಅಡ್ವೊಕೇಟ್ಸ ಯಾರು ಇದ್ದಾರೆ, ಅವರು ಜೂನಿಯರ್ ಅಡ್ವೊಕೇಟ್ಸ ಪರವಾಗಿ ಕೂಡ ಈ ಫಂಡಗೆ ಕಾಂಟ್ರಿಬ್ಯೂಟ್ ಮಾಡಬೇಕೆಂದು ತಾವು ತಿದ್ದುಪಡಿ ತಂದರೆ ಬಹಳ ಒಳ್ಳೆಯದಾಗುತ್ತದೆ. ಇಲ್ಲದಿದ್ದರೆ ಇದರಿಂದ ಏನು ಆಗುತ್ತದೆ, 10 ಸಾವಿರ ವರ್ಷಕ್ಕೆ ಆಗುತ್ತದೆ ಎಂದು ಏನು ಅಂದುಕೊಂಡಿದ್ದೀರಿ. ಇದರಿಂದ ಏನು ಉಪಯೋಗ ಆಗುವುದಿಲ್ಲ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಇಡೀ ಕರ್ನಾಕದ್ದು ತಾವು ಲಿಸ್ಟ ತರಿಸಿಕೊಂಡು ನೋಡಿ.

ಶ್ರೀ ಎಂ. ಸಿ. ನಾಣಯ್ಯ : ತಾವು ಹೇಳುತ್ತಾ ಇರತಕ್ಕದ್ದು ಒಪ್ಪಿಕೊಂಡಿದ್ದೇನೆ. ಅವರಿಗೆ ಕಾನೂನು ಮಾಡಿ ಜಾರಿಗೆ ತರಲಿಕ್ಕೆ ಇರತಕ್ಕ ಕಷ್ಟವನ್ನು ನಾನು ಬಲ್ಲೆ. ಅದನ್ನು ಈ ತರಹ

ತಂದಿದ್ದಾರೆ. ಅವರು ಕೆಲವು ನಿಯಮಗಳನ್ನು ಮಾಡುವುದಾದರೆ, ನಿಯಮಗಳನ್ನು ಮಾಡಿಕೊಂಡು ಜಾರಿಗೆ ತರಲಿ. ಬಹುಶಃ ಆದರಲ್ಲಿ ಪುನಃ ಏನಾದರೂ ಬದಲಾವಣೆ ಬರಬೇಕು ಎಂದು ಅವರು ಕೋರಿದಾಗ ನಾವು ಪುನಃ ನಿಮ್ಮ ಮುಂದೆ ತರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾಪ ಏನೆಂದರೆ:

"1996ರ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 20 ರಿಂದ 7 ರವರೆಗೆ

ಉಪಾಧ್ಯಕ್ಷರು : "ಖಂಡ 2 ರಿಂದ 7 ರವರೆಗೆ ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 7ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ :

"ಮೊದಲನೆಯ ಖಂಡ ಹೆಸರು ಮತ್ತು ಅವತರಣಿಗಕೆಗಳು ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ಈ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

SRI M.C. NANAIAH : (Minister Law and Party Affairs) : I beg to move: ``That the Karnataka Advocates Welfare Fund (Amendment) Bill, 1996 be passed".

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ:

"ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ಸಿ. ನಾಣಯ್ಯ : ಇನ್ನೊಂದು ಬಿಲ್ ಇದೆ ಮಾನ್ಯ ಉಪಾಧ್ಯಕ್ಷರೇ

SRI Y. RAMAKRISHNA : We have reached an understanding. ಸ್ಪೀಕರ್ ಹತ್ತಿರ ಮಾತನಾಡಿದ್ದೇವೆ. ಎರಡಕ್ಕೆ ಮಾತ್ರ ನಾವು ಪರ್ಮಿಷನ್ ಕೊಟ್ಟಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರಿಗೆ, ಒಂದು ಸಬ್ಮಿಷನ್ ಇದೆ. ಈಗ ಒಂದು ಮಸೂದೆ, ಕರ್ನಾಟಕ ಪಂಚಾಯತ್ ರಾಜ್ ಮಸೂದೆಗೆ ನಾವು ತಂದಿರತಕ್ಕ ತಿದ್ದುಪಡಿ ಕೇವಲ ಅಧ್ಯಕ್ಷರಿಗೆ ಅಧಿಕಾರವನ್ನು ಕೊಟ್ಟಿರತಕ್ಕದ್ದು.

ಶ್ರೀ ವೈ. ರಾಮಕೃಷ್ಣ : ಅಧ್ಯಕ್ಷರಿಗೆ ಅಧಿಕಾರವನ್ನು ಕೊಟ್ಟಿರುವ ಬಗ್ಗೆ ಮಸೂದೆಯನ್ನು ಪಾಸ್ ಮಾಡುವ ಮುಂಚೆ ಮಾತನಾಡುವುದು ಬೇಡವೇ?

ಶ್ರೀ ವಾಟಾಳ್ ನಾಗರಾಜ್ : ಅದರ ಬಗ್ಗೆ ಚರ್ಚೆ ಆಗಲೇಬೇಕು.

ಶ್ರೀ ಎಂ. ಸಿ. ನಾಣಯ್ಯ : ದಯವಿಟ್ಟು ತಾವು ಇದಕ್ಕೆ ಮಂಜೂರಾತಿ ಕೊಡಿ. ಇನ್ನೊಂದು ಮಾತು ಹೇಳುತ್ತೇನೆ. ಬಾಕಿ ಇರತಕ್ಕ ಬಿಲ್ ನಾವು ತರುವುದಿಲ್ಲ. ಈಗ ಬೆಂಗಳೂರು ಅರಮನೆ ವರ್ಗಾವಣೆ ವಿಧೇಯಕ ಇದೆ. ಅದನ್ನು ನಾವು ಈಗ ತರುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಚರ್ಚೆ ಆಗಲೇಬೇಕು.

ಶ್ರೀ ಎಂ. ಸಿ. ನಾಣಯ್ಯ : ಟ್ರಾನ್ಸ್ಪೋರ್ಟಿಗೆ ಸಂಬಂಧಪಟ್ಟಹಾಗೆ 700 ಬಸಗಳನ್ನು ಇವತ್ತು ನಾನು ಹೈರ್‌ಗೆ ಕೊಡುತ್ತೇವೆ. ನಾವು ಸಿಟಿ ಬಸ್‌ಗಳನ್ನೂ ಹಾಕಬೇಕಾಗುತ್ತದೆ. ತಾವು ಇದಕ್ಕೆ ಒಪ್ಪಿಗೆ ಕೊಡುವುದಿಲ್ಲ ಎಂದರೆ.

(ಗೊಂದಲ)

SRI Y. RAMA KRISHNA : There are good lot og legal issues. We have to discuss them.

(INTERRUPTIONS)

SRI M.C. NANAIAH : For the sake of discussion if you want to discuss, you can discuss; I have no objection.

ಉಪಾಧ್ಯಕ್ಷರು : ದುಡ್ಡು ಇಲ್ಲ ಇದರಲ್ಲಿ.

ಶ್ರೀ ಎಂ. ಸಿ. ನಾಣಯ್ಯ : ದುಡ್ಡು ಇಲ್ಲ, ಹೈರ್‌ಗೆ ಕೊಡುತ್ತೇವೆ

ಶ್ರೀ ಕೆ. ಎಸ್. ಬೀಳಗಿ : ಇದರಲ್ಲಿ ಏನೂ ಇಲ್ಲ.

ಶ್ರೀ ವೈ. ರಾಮಕೃಷ್ಣ : ಇದರಲ್ಲಿ ಏನು ಇದೆ ಎಂದು ನಾನು ಓದಿದ್ದೇನೆ. ಫೈನಾನ್ಷಿಯಲ್ ಮೆಮೋರ್ಯಾಂಡಮ್ ಇದೆ.

ಶ್ರೀ ಎಂ. ಸಿ. ನಾಣಯ್ಯ : ಫೈನಾನ್ಷಿಯಲ್ ಮೆಮೊರ್ಯಾಂಡಂ ಬಗ್ಗೆ ವಿಚಾರ ಬರುವುದಿಲ್ಲ.

ಶ್ರೀ ವೈ. ರಾಮಕೃಷ್ಣ : ನಿಮಗೆ ಉದಾಹರಣೆ ಕೊಡುತ್ತೇನೆ. ಎರಡನೆಯದಾಗಿ ಸ್ಕೀಮ್ ವಿಚಾರದಲ್ಲಿ ಸುಪ್ರೀಂ ಕೋರ್ಟಿನ ಡಿಸಿಷನ್ ಇದೆ. ನಾವು ಡಿಸ್ಕಷನ್ ಮಾಡಬೇಕಾಗುತ್ತದೆ. ನಾನು

ಸ್ಪೀಕರ್ ಹತ್ತಿರ ಹೇಳಿದ್ದೇನೆ. ದಯವಿಟ್ಟು ತಾವು ಕೋಆಪರೇಟ್ ಕೊಡಬೇಕು. ಸೋಮವಾರ ತೆಗೆದುಕೊಳ್ಳೋಣ.

ಉಪಾಧ್ಯಕ್ಷರು : ಇದನ್ನು ಮುಗಿಸೋಣ. ಇದರಲ್ಲಿ ಏನೂ ಇಲ್ಲ.

ಶ್ರೀ ವೈ. ರಾಮಕೃಷ್ಣ : ನಾನು ಸ್ಪೀಕರ್ ಹತ್ತಿರ ಮಾತನಾಡಿದ್ದೇವೆ. ನಾವು ಒಪ್ಪಿದ್ದೇವೆ.

ಉಪಾಧ್ಯಕ್ಷರು : ಇದು ಬರೀ ರಿಪ್ಲೇಸಮೆಂಟ್.

SRI Y. RAMAKRISHNA : I have seen the financial memorandum and it affects our schemes. There is a suprem court decision also

SRI M.C. NANAIAH : Yesterday you did not allow the the Goverment give to reply. This is not correct.

(INTERRUPTIONS)

ಶ್ರೀ ವೈ. ರಾಮಕೃಷ್ಣ : ನಾವು ಬೆಳಿಗ್ಗೆ ಒಂಭತ್ತು ಗಂಟೆಯಿಂದ ಕುಳಿತಿದ್ದೇವೆ.

(ಗೊಂದಲ)

ಶ್ರೀ ಎಂ. ಸಿ. ನಾಣಯ್ಯ : ನಿನ್ನೆ ನಮ್ಮನ್ನು ಮೂರು ನಾಲ್ಕು ಗಂಟೆ ಕಾಯಿಸಿದ್ದೀರಲ್ಲಾ. You did not allow the Government even to give a reply. You did not have the patience to hear the Government. This is the type of co¥operation you have given to us. ಇದು ಒಂದಕ್ಕೆಸಂಬಂಧಪಟ್ಟ ಹಾಗೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್ ಅವರೇ, ನಾವು ಇದರ ಬಗ್ಗೆ ನಾಲ್ಕು ಮಾತನಾಡಬೇಕು.

ಶ್ರೀ ಎಂ. ಸಿ. ಪ್ರಕಾಶ್ : ಇದು ಬರೇ ರಿಪ್ಲೇಸಮೆಂಟ್ ಆಫ್ ದಿ ಆರ್ಡಿನೆನ್ಸ.

(INTERRUPTIONS)

ಶ್ರೀ ವೈ. ರಾಮಕೃಷ್ಣ : ನಿಮಗೆ ಬೇಕಾದ ಅಮೆಂಡ್ ಮೆಂಟ್ ತರುತ್ತಿದ್ದೀರಿ. I don't approve this.

SRI M.P. PRAKASH : This is only a replacement Bill.

ಶ್ರೀ ವೈ. ರಾಮಕೃಷ್ಣ : ವಿಲೇಜ್ ಪಂಚಾಯಿತಿ ಭೇರ್ಮನಗೆ ಅಧಿಕಾರ ಇಲ್ಲ. ನೀವು ತಂದಿರುವ ಬಿಲ್. ಇದೆಯೇ?

ಶ್ರೀ ಎಂ. ಪಿ. ಪ್ರಕಾಶ್ : ಅಧಿಕಾರ ಇದೆ.

ಶ್ರೀ ವೈ. ರಾಮಕೃಷ್ಣ : ನೀವು ತಂದಿರುವುದು ಎಲ್ಲಿಗೆ ತಾಲ್ಲೂಕು ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ ಪಂಚಾಯಿತಿಗೆ. You have forgotten the Balavantha Rao Mehta Committee Report as well Ashok Mehta Committee report.

SRI M.P. PRAKASH : This is only replacement of ordinance.

(INTERRUPTIONS)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ರಾಮಕೃಷ್ಣ ಅವರು ಸೀನಿಯರ್ ಮೆಂಬರ್.11 ಗಂಟೆಯಿಂದ ಇಲ್ಲಿಯವರೆಗೆ ಎರಡೇ ಬಿಲ್ ಗವರ್ನಮೆಂಟ್ ಬಿಸಿನೆಸ್ ಆಗಿರುವುದು. ಬಾಕಿಯದು ಎಲ್ಲಾ ಪ್ರೈವೇಟ್ ಮೆಂಬರ್ಸ್ ಬಿಸಿನೆಸ್ ಮಾಡಿದ್ದೇವೆ. ಹೌಸ್ ಎಂದು ಹೇಳಿದರೆ ತಾವು ಪಾರ್ಲಿಮೆಂಟರಿ ಅಫೈರ್ಸ್ ಮಿನಿಸ್ಟರ್ ಆಗಿದ್ದವರು. ಹೌಸ್ ಎಂದರೆ ಗವರ್ನಮೆಂಟ್ ಬಿಸಿನೆಸ್ ಸಹ ಆಗಬೇಕು. ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದರೆ what type of House we are running. How many hours we have spent on Government business? Most of the time we have spent and consumed for private members business.

SRI Y. RAMAKRISHNA : I cannot understand.

ಉಪಾಧ್ಯಕ್ಷರು : ಈಗ ನಾನು ಲಾ ಮಿನಿಸ್ಟರಗೆ ಹೇಳುತ್ತಿದ್ದೇನೆ. ಎಲ್ಲಾ ವಿರೋಧ ಪಕ್ಷದವರು ಇಲ್ಲದಂತಹ ಸಮಯದಲ್ಲಿ ಮಸೂದೆ ತೆಗೆದುಕೊಳ್ಳುವುದು ಬೇಡ. ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಎಂ. ಸಿ . ನಾಣಯ್ಯ : ಇವರಿಗೆ ಕೂರಲಿಕ್ಕೆ ಬೇಕಾಗಿಲ್ಲ ಎಂದು ಹೇಳಿ ಒಬ್ಬೊಬ್ಬರೇ ಎದ್ದು ಹೋಗಿ ವಿರೋಧ ಪಕ್ಷದವರು ಇಲ್ಲ ಎಂದು ಹೇಳಿದರೆ.

ಶ್ರೀ ವೈ. ರಾಮಕೃಷ್ಣ : ಕ್ಷಮಿಸಿ ದಯವಿಟ್ಟು, ನಾವು ಇದ್ದೇವೆ.

ಶ್ರೀ ಎಂ.ಸಿ. ನಾಣಯ್ಯ : ಒಬ್ಬೊಬ್ಬರೇ ಎದ್ದು ಹೋಗಿದ್ದಾರೆ. ನಿನ್ನೆ ಸರ್ಕಾರದ ಪರವಿಂದ ರಿಪ್ಲೈ ಕೊಡುವಾಗ ಒಳಗಡೆ ಇದ್ದರು. ಇವತ್ತು ನಮ್ಮ ಸರ್ಕಾರ ಕಡೆಯಿಂದ ಲೆಜಿಸ್ಲೇಷನ್ ಪಾಸ್ ಆಗುವಾಗ ಒಬ್ಬೊಬ್ಬರೇ ಎದ್ದು ಹೋಗುವುದು. Official business means legislative business. We are not at all doing legislative business at all.

ಶಾಸನಾತ್ಮಕ ನಿರ್ಣಯಗಳು

ಸಿದ್ದಾಪುರ ತಾಲ್ಲೂಕು ಹೆಗ್ಗರಣಿ ಗ್ರಾಮದ ಅರಣ್ಯ ಸರ್ವೆ ನಂಬರ್ 96ರಲ್ಲಿ 10 ಗುಂಟೆ ಪ್ರದೇಶ ನಿರ್ವನೀಕರಣಗೊಳಿಸುವುದು.

ಶ್ರೀ ಹೆಚ್. ವೈ. ಮೇಟಿ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ಈ ಕೆಳಕಂಡ ನಿರ್ಣಯವನ್ನು ಸಭೆಯ ಅನುಮೋದನೆಗಾಗಿ ಮಂಡಿಸುತ್ತೇನೆ.